**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1910** |
| **ಸದಸ್ಯರ ಹೆಸರು** | **ಶ್ರೀ ಬಸನಗೌಡ ಬಾದರ್ಲಿ<br>(ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **24.03.2026** |
| **ಉತ್ತರಿಸುವ ಸಚಿವರು** | **ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು** |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಿಂಧನೂರ ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಲ್ಲಿ ಅಕ್ರಮ ಮರಳು/ ಗಣಿಗಾರಿಕೆ ಕುರಿತು ಎಷ್ಟು ಪ್ರಕರಣಗಳು ದಾಖಲಾಗಿವೆ;</td><td>2024-25ನೇ ಸಾಲಿನಿಂದ 2025-26(ಫೆಬ್ರವರಿ-2026ರ ಅಂತ್ಯದವರೆಗೆ) ಸಿಂಧನೂರು ತಾಲ್ಲೂಕು ವ್ಯಾಪ್ತಿಯಲ್ಲಿ ಅಕ್ರಮ ಮರಳು/ ಗಣಿಗಾರಿಕೆ, ಸಾಗಾಣಿಕೆ, ದಾಸ್ತಾನು ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ:
<table>
<tr><th rowspan="2">ವರ್ಷ</th><th colspan="3">ಅಕ್ರಮ ಗಣಿಗಾರಿಕೆ</th><th colspan="3">ಅಕ್ರಮ ಸಾಗಾಣಿಕೆ</th><th colspan="3">ಅಕ್ರಮ ದಾಸ್ತಾನು</th></tr>
<tr><th>ಪತ್ತೆ ಹಚ್ಚಿನ ಪ್ರಕರಣ</th><th>ವಿಧಿಸಿದ ದಂಡದ ಮೊತ್ತ</th><th>FIR</th><th>ಪತ್ತೆ ಹಚ್ಚಿನ ಪ್ರಕರಣ</th><th>ವಿಧಿಸಿ ಸಂಗ್ರಹಿಸಿದ ದಂಡದ ಮೊತ್ತ (₹ ಲಕ್ಷಗಳಲ್ಲಿ)</th><th>FIR</th><th>ಪತ್ತೆ ಹಚ್ಚಿನ ಪ್ರಕರಣ</th><th>ವಿಧಿಸಿದ ದಂಡದ ಮೊತ್ತ</th><th>FIR</th></tr>
<tr><td>2024-25</td><td>0</td><td>0</td><td>0</td><td>70</td><td>4.25</td><td>45</td><td>4</td><td>0</td><td>4</td></tr>
<tr><td>2025-26 (ಫೆಬ್ರವರಿ 2026ರ ಅಂತ್ಯಕ್ಕೆ)</td><td>1</td><td>0</td><td>1</td><td>94</td><td>4.37</td><td>67</td><td>0</td><td>0</td><td>0</td></tr>
<tr><td>ಒಟ್ಟು</td><td>1</td><td>0</td><td>1</td><td>164</td><td>8.62</td><td>112</td><td>4</td><td>0</td><td>4</td></tr>
</table></td></tr>
<tr><td>ಆ)</td><td>ಸದರಿ ಅಕ್ರಮ ಗಣಿಗಾರಿಕೆಯನ್ನು ಪರೋಕ್ಷವಾಗಿ ಬೆಂಬಲಿಸುವ ಅಧಿಕಾರಿಗಳ ವಿರುದ್ಧ ಯಾವ ಕ್ರಮವಹಿಸಲಾಗಿದೆ;</td><td>ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿ ಅಕ್ರಮ ಮರಳು ಮತ್ತು ಕಲ್ಲು ಗಣಿಗಾರಿಕೆ ಸಂಬಂಧಿಸಿದಂತೆ 02 ಪ್ರಕರಣಗಳಲ್ಲಿ ಶಾಮೀಲಾಗಿರುವ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಯವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದ್ದು, ಸದರಿ ಅಧಿಕಾರಿಯವರನ್ನು ಬೇರೆ ಜಿಲ್ಲೆಗೆ ವರ್ಗಾಯಿಸಲಾಗಿದೆ.</td></tr>
<tr><td>ಇ)</td><td>ಅಕ್ರಮ ಮರಳು ಗಣಿಗಾರಿಕೆಯನ್ನು ತಡೆಗಟ್ಟಲು ಸರ್ಕಾರದಿಂದ ಯಾವ ಕ್ರಮವಹಿಸಲಾಗಿದೆ;</td><td>ಅಕ್ರಮ ಮರಳು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳು:-<br>1. ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿದೆ.<br>2. ಸದರಿ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ. ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ತಡೆಯಲು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 4(1), 4(1-A) ಮತ್ತು ಕಲಂ 21 ಮತ್ತು 22ರಡಿಯಲ್ಲಿ ಹಾಗೂ ಕರ್ನಾಟಕ ಉಪ ಖನಿಜ (ತಿದ್ದುಪಡಿ) ರಿಯಾಯಿತಿ ನಿಯಮಾವಳಿ 1994 ರಡಿಯಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.<br>3. ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು "ಖನಿಜ ಸಂರಕ್ಷಣಾ ಪಡೆ" ಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
</table>

4. ಅನಧಿಕೃತ ಖನಿಜ ಸಾಗಾಣಿಕೆಯನ್ನು ಪತ್ತೆ ಹಚ್ಚಲು ಖನಿಜ ರವಾನೆ ಪರವಾನಗಿ ಕಡ್ಡಾಯಗೊಳಿಸಲಾಗಿದ್ದು, ಖನಿಜ ರವಾನೆ ಪರವಾನಗಿ ವಿಶೇಷ ರಕ್ಷಣಾತ್ಮಕ ಹಾಳೆಯಲ್ಲಿ ವಿತರಿಸಲಾಗುತ್ತಿದೆ
5. ಅನಧಿಕೃತ ಖನಿಜ ಸಾಗಾಣಿಕೆಯನ್ನು ತಡೆಗಟ್ಟಲು ಖನಿಜ ಸಾಗಾಣಿಕಾ ವಾಹನಗಳಿಗೆ GPS ಅಳವಡಿಸಿ ಕೇಂದ್ರೀಕೃತವಾಗಿ ನಿಗಾವಹಿಸಲು ತಂತ್ರಾಂಶ ರೂಪಿಸಲಾಗಿದೆ.
6. ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆ/ ದಾಸ್ತಾನಿಗೆ ಸಂಬಂಧಿಸಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಯಿಂದ ಕೈಗೊಂಡ ಕ್ರಮದ ವಿವರಗಳು ಈ ಕೆಳಕಂಡಂತಿರುತ್ತವೆ.

| ಅನಧಿಕೃತ ಮರಳು ಗಣಿಗಾರಿಕೆ | | | |
|---|---|---|---|
| ವರ್ಷ | ಪತ್ತೆ ಹಚ್ಚಿನ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ ಲಕ್ಷಗಳಲ್ಲಿ) | ದಾಖಲಿಸಿರುವ FIR ಗಳ ಸಂಖ್ಯೆ |
| 2022-23 | 1 | 0 | 1 |
| 2023-24 | 11 | 0 | 11 |
| 2024-25 | 5 | 0 | 5 |
| **ಒಟ್ಟು** | **17** | **0** | **17** |

| ಅನಧಿಕೃತ ಮರಳು ಸಾಗಾಣಿಕೆ | | | |
|---|---|---|---|
| ವರ್ಷ | ಪತ್ತೆ ಹಚ್ಚಿನ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ ಲಕ್ಷಗಳಲ್ಲಿ) | ದಾಖಲಿಸಿರುವ FIR ಗಳ ಸಂಖ್ಯೆ |
| 2022-23 | 330 | 25.30 | 106 |
| 2023-24 | 487 | 56.82 | 322 |
| 2024-25 | 405 | 27.03 | 276 |
| **ಒಟ್ಟು** | **1222** | **109.15** | **704** |

| ಅನಧಿಕೃತ ಮರಳು ದಾಸ್ತಾನು | | | |
|---|---|---|---|
| ವರ್ಷ | ಪತ್ತೆ ಹಚ್ಚಿನ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ ಲಕ್ಷಗಳಲ್ಲಿ) | ದಾಖಲಿಸಿರುವ FIR ಗಳ ಸಂಖ್ಯೆ |
| 2022-23 | 38 | 0 | 38 |
| 2023-24 | 70 | 0 | 70 |
| 2024-25 | 42 | 8.69 | 40 |
| **ಒಟ್ಟು** | **150** | **8.69** | **148** |

| | | |
|---|---|---|
| ಈ) | ಜಿ.ಪಿ.ಎಸ್ ಟ್ರ್ಯಾಕಿಂಗ್ ಹಾಗೂ ಆನ್‌ಲೈನ್ ಪರವಾನಿಗಿ ವ್ಯವಸ್ಥೆ ಸಮರ್ಪಕವಾಗಿ ಜಾರಿಯಲ್ಲಿದೆಯೇ; | • ಜಿ.ಪಿ.ಎಸ್ ಟ್ರ್ಯಾಕಿಂಗ್ ಹಾಗೂ ಆನ್‌ಲೈನ್ ಪರವಾನಗಿ ವ್ಯವಸ್ಥೆ ಜಾರಿಯಲ್ಲಿದೆ.<br>• ಖನಿಜ ಸಾಗಾಣಿಕೆ ಮಾಡುವ ವಾಹನಗಳ ಚಲನ-ವಲನಗಳನ್ನು ನಿಗಾವಹಿಸಲು One State One GPS (OSOG) ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೊಳಿಸಲಾಗಿದೆ. |

ಸಂಖ್ಯೆ:ಸಿಐ-ಎಂಎಂಎನ್/140/2026

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.